

ಕುಳಿತಲ್ಲೇ ಫ್ರಾಣಿಸಿ ಹಿಡಿದು ನಮ್ಮ ಮುಂದೆ ವಿವರಿಸಿ ಹೇಳುತ್ತಿದ್ದ ಕಾಮ್ರೇಡ್ ಆಲಿ ರೈಟರ ಮೂಗು ಇಷ್ಟೆಲ್ಲ ಅಲ್ಲೋಲಕಲ್ಲೋಲಗಳು ನಡುವೆಯೂ ಬರಲಿರುವ ದುಡಿಯುವ ವರ್ಗದ ರಾಜ್ಯವನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂಬಂತೆ ಅನಭಿಷಕ್ತ ಚಕ್ರವರ್ತಿಯಂತೆ ಅವರ ಮುಖದ ಮೇಲೆ ಕೂತಿತ್ತು.

ಆದರೆ, ನನಗೆ ಯಾಕೋ ಆಲಿ ರೈಟರಿಗೆ ಆಯಾಚಿತವಾಗಿ ವಯಸ್ಸಾಗಿ ಹೋಗಿದೆ ಅನಿಸಿತು.

'ಜುಬೇದಾಳಿಂದ ಏನಾದರೂ ಸುದ್ದಿ ಬಂತಾ ಮಾವಾ' ಕೆದಕಲು ಇಷ್ಟವಿಲ್ಲದಿದ್ದರೂ ವಿಷಯ ಮುಂದುವರಿಸಲು ಕೇಳಿದೆ.

'ಸುದ್ದಿಯೂ ಇಲ್ಲ. ಎಂತ ಮಣ್ಣಾಂಗಟ್ಟಿಯೂ ಇಲ್ಲ. ಅವಳು ಹಾಳಾಗಿ ಹೋಗಲಿ' ಅವರು ಶಪಿಸಿದರು.

'ಅಮ್ಮಾಯಿ ಹೇಗಿದ್ದಾರೆ?'

'ಅವಳು ಹೇಗಿದ್ದರೆ ಏನು? ನಿನ್ನ ರಾವು ಮುಗಿಯುವಷ್ಟು ತಿನ್ನಲು ಕಳಿಸಿದ್ದಾಳಲ್ಲ. ಸುಮ್ಮನೆ ತಿನ್ನು' ಗದರಿಸಿದರು.

'ಮಾವ ಈಗ ನಾನೇನು ಮಾಡಬಹುದು?'

'ನಿನ್ನ ಕೈಯಲ್ಲಿ ಒಂದು ಐವತ್ತು ಸಾವಿರ ಇದ್ದರೆ ಕೊಡು. ತೋಟದ ಆಳುಗಳಿಗೆ ವಾರದ ಅಡ್ವಾನ್ಸ್ ಬಟವಾಡೆ ಮಾಡದೆ ಅವರು ಹೊಡೆಯಲು ಬಂದಿದ್ದರು'.

'ಯಾಕೆ? ತೋಟದ ಸಾಹುಕಾರರು ಸಂಬಳದ ಬಟವಾಡೆಗೆ ಬಂದಿಲ್ಲವಾ?'

'ಇಲ್ಲ. ಅವರನ್ನು ಆನೆ ಚೌಕೂರು ಗೇಟಿನಲ್ಲಿ ಫಾರೆಸ್ಟಿನವರು ಲಾರಿ ಸಮೇತ ಹಿಡಿದು ಮೈಸೂರು ಜೇಲಿಗೆ ಸೇರಿಸಿದ್ದಾರೆ'.

'ಯಾಕೆ ಏನಾಯ್ತು?

'ಲಾರಿಯಲ್ಲಿ ಸಾಹುಕಾರರು ಸಟ್ಟುಗದ ಮರ ಕಡಿದು ಸಾಗಿಸುತ್ತಿದ್ದರು. ದುಡ್ಡು ಕೊಡುವ ವಿಷಯದಲ್ಲಿ ಫಾರೆಸ್ಟಿನವರಿಗೂ ಸಾಹುಕಾರರಿಗೂ ಮಾತಿನಲ್ಲಿ ಏರುಪೇರಾಗಿ ಅದು ಮೇಲಿನವರೆಗೂ ಹೋಗಿ ಒಳಗೆ ಹಾಕಿದ್ದಾರೆ. ಇರಲಿ ಬಿಡು. ಕ್ರಾಂತಿಯ ದಾರಿಯಲ್ಲಿ ಇದೆಲ್ಲ ಇದ್ದದ್ದೇ... ಸಾಹುಕಾರರು ಮುಂದಿನ ಗುರುವಾರ ಬರುತ್ತಾರೆ. ಶುಕ್ರವಾರ ನಿನಗೆ ವಾಪಾಸು ಕೊಡುತ್ತೇನೆ. ಅಲ್ಲಿಯವರೆಗೆ ಕೊಟ್ಟಿರು'.